# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 56/2019

**ಚಾಸಾ-7 ಪ್ರಾಸಾ-10**

| | | |
|---|---|---|
| ಹೆಸರು | – | ಕೃಷ್ಣಮೂರ್ತಿ |
| ತಂದೆಯ ಹೆಸರು | – | ನಾರಾಯಣ |
| ವಯಸ್ಸು | – | 55 ವರ್ಷ |
| ವೃತ್ತಿ | – | ಕೂಲಿ |
| ವಾಸಸ್ಥಳ | – | ಅಂಡಗದೋದೂರು |

(ದಿನಾಂಕಃ **13.11.2025** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 20.11.2018 ರಂದು ನಾನು ಚಾಸ 1 ರವರ ಮನೆಯ ಹತ್ತಿರ ಹೋದಾಗ ಗಲಾಟೆ ಆದ ಸ್ಥಳದಲ್ಲಿ ಮಹಜರ್ ಮಾಡುತ್ತೇವೆ ಎಂದು ನನ್ನು ಮತ್ತು ಚಾಸ 8 ರವರನ್ನು ನೋಟಿಸ್ ಕೊಟ್ಟು ಕರೆದಿರುತ್ತಾರೆ. ನಾವು ಘಟನೆ ಆದ ಸ್ಥ,ಳಕ್ಕೆ ಹೋಗಿರುತ್ತೇವೆ. ಸಾಕ್ಷಿಯು ಸದರಿ ನೋಟಿಸ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ10 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ10(ಬಿ) ಎಂದು ಗುರುತಿಸಲಾಯಿತು.

2. ಸದರಿ ಗಲಾಟೆ ಆದ ಸ್ಥಳವನ್ನು ಚಾಸ 2 ರವರು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆಯನ್ನು 12 ರಿಂದ 1 ಗಂಟೆಯವರೆಗೇ ಜರುಗಿಸಿ ಅಲ್ಲಿದ್ದ ಕತ್ತಿ ಮತ್ತು ಕಾಡು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಕತ್ತಿ ಮತ್ತು ದೊಣ್ಣೆ ಚಾಸ 1 ರವರಿಗೆ ಗಲಾಟೆ ಮಾಡಿದ ವಸ್ತುಗಳಾಗಿರುತ್ತವೆ.

3. ಸಾಕ್ಷಿಯು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ2 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಘಟನಾ ಸ್ಥಳದ ಕಚ್ಚಾನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ11 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ11(ಬಿ) ಎಂದು ಗುರುತಿಸಲಾಯಿತು.

5. ಸದರಿ ಘಟನಾ ಸ್ಥಳದಲ್ಲಿ ತೆಗೆದ ಬಾವ ಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದವುಗಳು ಈಗಾಗಲೇ ಕ್ರಮವಾಗಿ ನಿಪಿ3 ಮತ್ತು ನಿಪಿ4 ಎಂದು ಗುರುತಿಡಿಸ್ಪಟ್ಟಿರುತ್ತವೆ, ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕತ್ತಿ ಮತ್ತು ದೊಣ್ಣೆಯನ್ನು ನೊಡೀ ಗುರುತಿಸಿದ್ದು ಅದು ಈಗಾಗಲೇ ಎಂ.ಒ 1 ಮತ್ತು 2 ಎಂದು ಗುರುತಿಸ್ಪಟ್ಟಿರುತ್ತವೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದಃ</u>**

1. ನಮ್ಮ ಊರಿನಿಂದ ಮತ್ತು ಘಟನಾ ಸ್ಥಳ ಸುಮಾರು 20 ಕಿ.ಮೀ ಅಂತರ ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು ಸುಮಾರು 2 ಕಿ.ಮೀ ಅಂತರ ಇರುತ್ತದೆ ಎಂದು ನುಡಿಯುತ್ತಾರೆ.

2. ಘಟನಾ ಸ್ಥಳದ ಸುತ್ತ ಮುತ್ತ ವಾಸದ ಮನೆಗಳು ಇರುತ್ತವೆ ಎಂದು ಸೂಚಿಸಿದರೆ ಸರಿ. ಅಲ್ಲಿ ಊರಿನವರು ನಾನು, ಚಾಸ8 ಮತ್ತು ಚಾಸ1 ರವರು ಬಿಟ್ಟು ಬೇರೆ ಯಾರೂ ಇರಲಿಲ್ಲ. ನಾನು ಆ ದಿನ ಮದ್ಯಾಹ್ನ 12 ಗಂಟೆಗೆ ಆ ಊರಿಗೆ ಹೋಗಿರುತ್ತೇನೆ.

3. ಮಹಜರ್ ಅನ್ನು ನಾವು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ಯಾರು ಮಧ್ಯ ಆಗಿದ್ದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಸೂಚಿಸಿದರೆ ಸರಿ. ಕತ್ತಿ ಮತ್ತು ದೊಣ್ಣೆಯನ್ನು ಪೊಲಿಸರಿಗೆ ನಾವು ಕೊಟ್ಟಿರುವುದಿಲ್ಲ ಎಂದು ಸೂಚಿಸಿದರೆ ಸರಿ ಸಾಕ್ಷಿಯು ಮುಂದುವರಿದು ಸ್ಥಳದಲ್ಲಿ ಬಿದ್ದಿರುತ್ತದೆ ಎಂದು ನುಡಿಯುತ್ತಾರೆ.

4. ಮಹಜರ್ ನಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನಗೆ ಘಟನಾ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು

ಚಾಸ 1 ರವರು ವಿಶ್ವಾಸದವರು ಇದ್ದು ಮತ್ತು ಊರುಮನೆಯವರು ಮತ್ತು ಒಟ್ಟಿಗೆ ಕೆಲಸ ಮಾಡುತ್ತೇವೆ ಎಂದರೆ ಸರಿ.

5. ನಾನು ಮಹಜರ್ ಸ್ಥಳದಲ್ಲಿ ಇರಲಿಲ್ಲ ಮತ್ತು ಮಹಜರ್ ಗೆ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಸ 1 ರವರು ಪರಿಚಯ ಇರುವುದರಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.